ಆ) 1984–85 ರಿಂದ ಇದುವರೆಗೆ ಮೈಸೂರು ನಗರದಲ್ಲಿ ಗಿಡ ನೆಡಲು ಆಗಿರುವ ಖರ್ಚು 24,40,750.00 ರೂಗಳು.

ಇ) ಪ್ರತಿ ವರ್ಷ ಒದಗಿಸುವ ಮೊತ್ತಕ್ಕೆ ಅನುಗುಣವಾಗಿ ಯೋಜನೆಯನ್ನು ರೂಪಿಸಿಕೊಂಡು ಕಾರ್ಯಗತಗೊಳಿಸಲಾಗುವುದು.

ಬಸವಕಲ್ಯಾಣ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ

354. ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಬಸವಕಲ್ಯಾಣ ತಾಲ್ಲೂಕಿನ ಯಾವ ಯಾವ ಗ್ರಾಮಗಳಲ್ಲಿ ಕುಡಿಯುವನೀರಿನ ಸಮಸ್ಯೆ ಇದೆ.

ಆ) ಈ ಸಮಸ್ಯೆಯನ್ನು ಬಗಹರಿಸಲು ಕೊಳವೆ ಬಾವಿಗಳನ್ನು ತೋಡುವಂತೆ ಸರ್ಕಾರಕ್ಕೆ ಮನವಿಗಳೇನಾದರೂ ಬಂದಿದೆಯೇ?

ಇ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು):–

ಅ) ಬಸವಕಲ್ಯಾಣ ತಾಲ್ಲೂಕಿನ ಈ ಕೆಳಕಂಡ ಗ್ರಾಮಗಳಲ್ಲಿ ಕುಡಿಯುವನೀರಿನ ಸಮಸ್ಯೆ ಇರುತ್ತದೆ.

1) ಅಟ್ಟೂರ್ (2) ಹಣವಂತವಾಡಿ (3) ಕೊಹಿನೂರ್‌ವಾಡಿ (4) ಯಲ್ಲದಗುಂಡಿ ತಾಂಡಾ (5) ಗುಂಡೂರ್ ತಾಂಡಾ (6) ಪಂದರಗೇರಾ ತಾಂಡ (7) ಬಣಗಾರ್‌ವಾಡಿ (8) ಅಂಬೇವಾಡಿ (9) ಗಡಿರಾಯಹಳ್ಳಿ.

ಆ) ಹೌದು ಬಂದಿದೆ.

ಇ) ಈಗಾಗಲೇ ಜಿಲ್ಲಾ ಪರಿಷತ್‌ನವರಿಗೆ ಸಮಸ್ಯಾತ್ಮಕ ಗ್ರಾಮಗಳಲ್ಲಿ ನೀರು ಪೂರೈಕೆ ಕಾರ್ಯಕ್ರಮಗಳನ್ನು ಆದ್ಯತೆಯ ಮೇರೆಗೆ ನಿಯೋಜಿಸಿ ಕಾರ್ಯಗತ ಮಾಡಲು ಸೂಚಿಸಲಾಗಿದೆ.

ಮಂಡಲ ಪಂಚಾಯಿತಿಗಳ ಸಭೆಗಳು

448. ಶ್ರೀ ಎ. ನಾಗರಾಜು (ಮಾಲೂರು):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?